ಬಳ್ಳಾರಿ ಜಿಲ್ಲೆಯ ಸಂಡೂರಿನ ದೇವದಾರಿ ಕಬ್ಬಿಣದ ಅದಿರು ಗಣಿ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ಅವಕಾಶ ಕಲ್ಪಿಸುವ ಕಡತಕ್ಕೆ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸಹಿ ಹಾಕುತ್ತಿದ್ದ ಸಂದರ್ಭದಲ್ಲೇ (ಜೂನ್ 12ರ ಬುಧವಾರ) ಅತ್ತ ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ಆಟಗಾರರು ಏರುತ್ತಿರುವ ಬಿಸಿಲಿನ ಬೇಗೆಯನ್ನು ಗಮನಿಸಿ, ಸ್ಪರ್ಧೆಗಳ ವೇಳಾಪಟ್ಟಿಯನ್ನು ಬದಲಿಸಬಹುದೇ ಎಂದು ಆಯೋಜಕರನ್ನು ವಿಚಾರಿಸುತ್ತಿದ್ದರು. ಅಷ್ಟೇ ಅಲ್ಲ, 'ಬ್ರಿಟಿಷ್ ಅಸೋಸಿಯೇಷನ್ ಫಾರ್ ಸಸ್ಟೆನೆಬಲ್ ಸ್ಪೋರ್ಟ್ ಅಂಡ್ ಫ್ರಂಟ್ ರನ್ನರ್ಸ್' ಈ ಕುರಿತು ವರದಿಯೊಂದನ್ನು ಸಿದ್ಧಪಡಿಸಿದ್ದು, 'ಬಿಸಿಗಾಳಿಯ ದೆಸೆಯಿಂದಾಗಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಆಟಗಾರರ ಆರೋಗ್ಯಕ್ಕೆ ತೊಂದರೆಯಾಗಬಹುದು, ತೀರಾ ಬಿಸಿ ವಾತಾವರಣವನ್ನು ತಾಳಲಾರದೇ ಸಾವನ್ನಪ್ಪುವ ಸಾಧ್ಯತೆಯೂ ಇದೆ' ಎಂದು ಆತಂಕ ವ್ಯಕ್ತಪಡಿಸಿದೆ.

ಪ್ಯಾರಿಸ್‌ನಲ್ಲಿ ಮಾತ್ರವಲ್ಲ, ಬಿಸಿಗಾಳಿಗೆ ಸಿಲುಕಿ ವಿಶ್ವದ ನಾನಾ ಭಾಗಗಳು ಕಾವಲಿಯಂತಾಗಿವೆ. ಆ ಕಾವಲಿಗಳಲ್ಲಿ ಜನ ಹುಳುಗಳಂತೆ ಪತರಗುಡುತ್ತಿದ್ದಾರೆ. ಭಾರತದ ಪರಿಸ್ಥಿತಿಯನ್ನೇ ನೋಡಿ. ಜೂನ್ 18ರ ಬಳಿಕ ದೆಹಲಿಯಲ್ಲಿ ಮೂರು ದಿನಗಳ ಅವಧಿಯಲ್ಲಿ ನೂರಾರು ಮಂದಿ ಸಾವನ್ನಪ್ಪಿದ್ದಾರೆ. ನೋಯ್ಡಾದಲ್ಲಿ ಹತ್ತು ಮಂದಿ ಜೀವ ಕಳೆದುಕೊಂಡಿರುವ ವರದಿಯಾಗಿದೆ. ದೆಹಲಿಯ ರಾಮಮನೋಹರ್ ಲೋಹಿಯಾ, ಸಪ್ಧರ್‌ಜಂಗ್, ಎಲ್‌ಎನ್‌ಜೆಪಿ ಆಸ್ಪತ್ರೆಗಳಲ್ಲಿ ಬಿಸಿಗಾಳಿಯಿಂದ ಅಸ್ವಸ್ಥರಾದ ನೂರಾರು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುರಗಾಂವ್‌ನ ಸಿ.ಕೆ. ಬಿರ್ಲಾ ಆಸ್ಪತ್ರೆಗೆ ಪ್ರತೀ ದಿನ ಬಿಸಿಗಾಳಿಯ ಸಮಸ್ಯೆಯಿಂದ ಅಸ್ವಸ್ಥರಾದ ಅನೇಕರು ದಾಖಲಾಗುತ್ತಿದ್ದಾರೆ.

ರಾಯಿಟರ್ಸ್‌ನ ವರದಿ ಹೇಳುತ್ತಿದೆ: ಭಾರತದಲ್ಲಿ 2024ರ ಬೇಸಿಗೆಯಲ್ಲಿ 40 ಸಾವಿರಕ್ಕೂ ಹೆಚ್ಚು ಜನರು ಬಿಸಿಗಾಳಿಯ ಹೊಡೆತಕ್ಕೆ ಸಿಲುಕಿದ್ದಾರೆ. ಬಿಸಿಗಾಳಿಯಿಂದಾಗಿ ಒಂದಿಲ್ಲೊಂದು ಸಮಸ್ಯೆಗೆ ಈಡಾಗಿದ್ದಾರೆ. ದೀರ್ಘಕಾಲದ ಬಿಸಿಗಾಳಿಯ ವಾತಾವರಣದಿಂದ ತತ್ತರಿಸಿರುವ ದೇಶದ ವಿವಿಧ ಭಾಗಗಳಲ್ಲಿನ ಸಾವಿರಾರು ಜನರು ಬಸವಳಿದು ಕಂಗಾಲಾಗಿದ್ದಾರೆ. ನೂರಕ್ಕೂ ಹೆಚ್ಚು ಸಾವುಗಳಾಗಿವೆ.

ಸೌದಿ ಅರೇಬಿಯಾದ ಮೆಕ್ಕಾದಲ್ಲಂತೂ ಸುಡುಗಾಳಿ ದೊಡ್ಡ ಅನಾಹುತವನ್ನೇ ಸೃಷ್ಟಿಸಿದೆ. ಅಲ್ಲಿನ ಬಿಸಿಲ ಝಳಕ್ಕೆ 900ಕ್ಕೂ ಹೆಚ್ಚು ಯಾತ್ರಾರ್ಥಿಗಳು ಬಲಿಯಾಗಿದ್ದಾರೆ. ಅವರ ಪೈಕಿ 68 ಮಂದಿ ಭಾರತೀಯರು ಸೇರಿದ್ದಾರೆ (ಜೂನ್ 20ರ ವರದಿಯ ಅಂಕಿಅಂಶಗಳು).

ವೃದ್ಧರು ಮತ್ತು ಅನಾರೋಗ್ಯಪೀಡಿತರ ಸಾವಿಗೆ ಬೇರೆ ಕಾರಣಗಳನ್ನು ಕೊಟ್ಟರೂ, ಅವರ ಪರಿಸ್ಥಿತಿಯು ಬಿಗಡಾಯಿಸುವುದಕ್ಕೆ ಬಿಸಿಲ ಝಳವೇ ಕಾರಣವಾಗಿದೆ. ಏಷ್ಯಾದಲ್ಲಿ ಈ ಬಿಸಿಗಾಳಿಯ ಅಟಾಟೋಪ ಮಿತಿ ಮೀರಿದ್ದು, ಲಕ್ಷಗಟ್ಟಲೆ ಜನರು ಉಷ್ಣತೆಯನ್ನು ತಡೆಯಲಾರದೆ ಕಂಗಾಲಾಗುತ್ತಿದ್ದಾರೆ. ತಾಪಮಾನದ ಪ್ರಮಾಣ ಜ್ವರದಂತೆ ಏರುತ್ತಲೇ ಇದ್ದು, ಹೊಸ ದಾಖಲೆಗಳು ಮಾನಸಿಕವಾಗಿಯೂ ಕಾವು ಉಂಟುಮಾಡುತ್ತಿವೆ.





ಅಮೆರಿಕದ ವಾಷಿಂಗ್ಟನ್‌ನಲ್ಲೂ ಸುಡುಗಾಳಿಯ ಕೆನ್ನಾಲಿಗೆಗಳ ಆರ್ಭಟ. ಅಬ್ದುಲ್ಲಾ ಎನ್ನುವ 9 ವರ್ಷದ ಈ ಬಾಲಕನಿಗೆ ಉದ್ಯಾನದ ಕಾರಂಜಿಯೇ ಧಗೆ ತಣಿಸಿಕೊಳ್ಳುವ ತಾಣ. ಫೋಟೊ: ರಾಯಿಟರ್ಸ್